# ಪೊಲೀಸ್ ಗತ್ತಲ್ಲಿ ಕಾಣಿಸಿಕೋಬೇಕು



## ಪ್ರಿಯಾಂಕಾ

ಕಲರ್ಸ್ ಕನ್ನಡದ 'ಅಗ್ನಿಸಾಕ್ಷಿ'ಯ ಚಂದ್ರಿಕಾ

★ *ನಟಿ ಆಗಬೇಕು ಎನ್ನುವುದು ನಿಮ್ಮ ಕನಸಾಗಿತ್ತಾ?*

ಆಗ ಇರಲಿಲ್ಲ, ಈಗ ಇದೆ. ಅಂದರೆ, ನಾನು ಅಭಿನಯಕ್ಕೆ ಬಂದಿದ್ದು ಆಕಸ್ಮಿಕ. ಎರಡು ವರ್ಷದ ಹಿಂದೆ 'ಅವನು ಮತ್ತು ಶ್ರಾವಣಿ' ಮೂಲಕ ನಟನಾ ವೃತ್ತಿಯನ್ನು ಆರಂಭಿಸಿದೆ. ಓದನ್ನೂ ಮುಂದುವರಿಸಬೇಕು ಅಂದುಕೊಂಡಿದ್ದೇನೆ. ಬಿಬಿಎಂ ಮುಗಿದಿದೆ. ಎಂಬಿಎ ಮಾಡುತ್ತಲೇ ನಟನೆಯನ್ನು ಮುಂದುವರಿಸುತ್ತೇನೆ.

★ *ಎಂತಹ ಪಾತ್ರಗಳು ನಿಮಗಿಷ್ಟ?*

ಗತ್ತಿನ ಪಾತ್ರ ನಿರ್ವಹಿಸಬೇಕು ಎನ್ನುವುದು ನನ್ನ ಆಸೆ. ಮುಂದೆ ಸಿನಿಮಾದಲ್ಲಿ ಅವಕಾಶ ಸಿಕ್ಕರೂ ಬಣ್ಣ ಹಚ್ಚುತ್ತೇನೆ. ವಿವಿಧ ಬೈಕ್‌ಗಳನ್ನು ಓಡಿಸುವಂತೆ ಪಾತ್ರ ನಿರೂಪಿಸಿದರೆ ಚೆನ್ನಾಗಿರುತ್ತದೆ. ಪೊಲೀಸ್ ಪಾತ್ರದಲ್ಲಿ ಕಾಣಿಸಿಕೊಳ್ಳಬೇಕು ಎನ್ನುವುದು ಇಷ್ಟ. ಹಾಗೆಂದು ಒಂದಕ್ಕೇ ಅಂಟಿಕೊಳ್ಳುವುದಿಲ್ಲ. ವಿವಿಧ ಗುಣಾವಗುಣಗಳನ್ನು ಹೊರಹೊಮ್ಮಿಸುವ ಪಾತ್ರಗಳನ್ನು ನಿರ್ವಹಿಸಬೇಕು. ಆದರೆ ಪೊಲೀಸ್ ಅಧಿಕಾರಿಯಾಗಿ ನಟಿಸಬೇಕು ಎನ್ನುವುದು ಏನೋ ಒಂಥರಾ. ಇದರ ಜೊತೆ ವಿಲನ್ ಛಾಯೆಯ ಪಾತ್ರಗಳೆಂದರೆ ನನಗೆ ಇಷ್ಟ.

★ *'ಅಗ್ನಿ ಸಾಕ್ಷಿ' ದಿಕ್ಕಿಲ್ಲದಂತೆ ಸಾಗುತ್ತಿದೆ ಎಂಬ ಆರೋಪ ಇದೆಯಲ್ಲ..*

ನಮ್ಮ ಕೈಯಲ್ಲಿ ಏನೂ ಇಲ್ಲ. ಕಥೆ ಅತ್ತಿತ್ತ ಸಾಗಿದರೂ ಮತ್ತೆ ಮೂಲ ಧಾರೆಗೆ ಬರುತ್ತದೆ. ವೀಕ್ಷಕರಿಗೆ ಹಾಗೆ ಅನ್ನಿಸಬಹುದು. ನೆಗೆಟಿವ್ ಪಾತ್ರ ಆದ್ದರಿಂದ ಆರಂಭದಲ್ಲಿ ನನಗೂ ಒಂದಿಷ್ಟು ಕಷ್ಟ ಆಯಿತು. ದಿನಗಳು ಉರುಳಿದಂತೆ ಅಭ್ಯಾಸ ಆಯಿತು. ಈಗ ಪಾತ್ರ ಹಿಡಿತಕ್ಕೆ ಸಿಕ್ಕಿದೆ. ನನಗೂ ಖುಷಿ ಆಗುತ್ತಿದೆ. ನಮ್ಮ ತಂದೆಗೂ ಕೂಡ ಪಾತ್ರ ತುಂಬಾ ಇಷ್ಟ ಆಗುತ್ತದೆ. ಅವರೂ ಧಾರಾವಾಹಿ ನೋಡುತ್ತಾ ನನಗೆ ತರಬೇತಿ ನೀಡುತ್ತಿರುತ್ತಾರೆ. ಇನ್ನೂ ಚೆನ್ನಾಗಿ ಅಭಿನಯಿಸಬೇಕು ಎಂದು ಹೇಳುತ್ತಾರೆ.

★ *ನಟಿ ಆಗದಿದ್ದರೆ ಏನು ಮಾಡುತ್ತಿದ್ರಿ?*

ನಟಿಯಾಗಿದ್ದು ಆಕಸ್ಮಿಕ. ನಾನು ಸ್ವಂತ ವ್ಯವಹಾರ ಮಾಡಬೇಕು ಎಂದುಕೊಂಡಿದ್ದೆ. ಮಾರುಕಟ್ಟೆಯನ್ನು ಅರ್ಥಮಾಡಿಕೊಂಡು ಆದಾಯ ತರಬಲ್ಲ ಯಾವುದಾದರೊಂದು ಉದ್ಯಮವನ್ನು ಮಾಡುತ್ತಿದ್ದೆ. ಈಗ ಅದನ್ನು ಬಿಟ್ಟು ಇಲ್ಲಿಗೆ ಬಂದಿದ್ದೇನೆ. ಇಲ್ಲೇ ಇರಬೇಕು ಎಂದುಕೊಂಡಿದ್ದೇನೆ.

★ *ಫಿಟ್ನೆಸ್ ಹೇಗೆ ನಿರ್ವಹಿಸುತ್ತೀರಿ?*

ನಮಗಿರುವ ದೊಡ್ಡ ಸವಾಲೆಂದರೆ ಫಿಟ್ನೆಸ್ ಕಾಪಾಡಿಕೊಳ್ಳುವುದು. ಮೊದಲು ಜಿಮ್‌ಗೆ ಹೋಗುತ್ತಿದ್ದೆ. ಅಲ್ಲಿ ಮಾರ್ಗದರ್ಶಕರು ಸೂಕ್ತ ಸೂಚನೆ ನೀಡುತ್ತಿದ್ದರು. ಈಗ ಸಮಯದ ಹೊಂದಾಣಿಕೆ ಕಷ್ಟ ಆಗುತ್ತಿದೆ. ಈ ಕಾರಣಕ್ಕೆ ಮನೆಯಲ್ಲಿಯೇ ಕೆಲ ಉಪಕರಣಗಳನ್ನು ತಂದಿಟ್ಟುಕೊಂಡು ಅಭ್ಯಾಸ ಮಾಡುತ್ತಿದ್ದೇನೆ. ಊಟದಲ್ಲಿಯೂ ತೀರಾ ನಿಯಂತ್ರಣವನ್ನು ಪಾಲಿಸುವುದಿಲ್ಲ. ಬಹುತೇಕ ರಾತ್ರಿ ಹೊತ್ತು ಅಕ್ಕಿಯಿಂದ ತಯಾರಿಸಿದ ಆಹಾರ ಪದಾರ್ಥಗಳನ್ನು ಸೇವಿಸುವುದಿಲ್ಲ.

★ *ಮಧ್ಯಂತರ 'ಚಂದ್ರಿಕಾ' ಪಾತ್ರ ಹೇಗೆನಿಸಿತು?*

ಬೇರೆ ಯಾವುದೋ ಧಾರಾವಾಹಿಗೆ ಆಡಿಷನ್ ಕೊಡಬೇಕು ಎಂದು ಹೋಗಿದ್ದೆ. ಆಗ ರಾಮ್‌ಜೀ ಅವರು ಚಂದ್ರಿಕಾ ಪಾತ್ರವನ್ನು ಮುಂದುವರಿಸುವಂತೆ ಸೂಚಿಸಿದರು. ನಾನೂ ಒಪ್ಪಿದೆ. ಆದರೆ ತುಂಬಾ ಕಷ್ಟ ಅನ್ನಿಸಿತು. ಕಲಿಯುತ್ತಾ ಕಲಿಯುತ್ತಾ ಕರಗತ ಮಾಡಿಕೊಂಡಿದ್ದೇನೆ. ಈಗ ಸಲೀಸು ಅನ್ನಿಸಿದೆ. ನನಗೆ ನಟನೆಗೆ ನೆಗೆಟಿವ್ ಪ್ರತಿಕ್ರಿಯೆ ತೆಗೆದುಕೊಳ್ಳುವುದು ಇಷ್ಟ ಇಲ್ಲ. ಜನ ಮೆಚ್ಚುವಂತೆ ಪಾತ್ರಕ್ಕೆ ನ್ಯಾಯ ಕೊಡಬೇಕು ಎಂದೇ ಬಣ್ಣ ಹಚ್ಚುತ್ತೇನೆ. ನಿಜಕ್ಕೂ ಅರ್ಥದಲ್ಲಿ ಪಾತ್ರ ನಿರ್ವಹಿಸುವುದು ಸ್ವಲ್ಪ ಕಷ್ಟದ ಕೆಲಸ. ಏಕೆಂದರೆ, ವೀಕ್ಷಕರಿಗೆ ಮೊದಲೇ ಒಂದು ಪಾತ್ರದ ಪರಿಚಯ ಇರುತ್ತದೆ. ಅದನ್ನು ಮರೆಯುವಂತೆ ಮಾಡುವ ಹೊಣೆ ಕೂಡ ನಮ್ಮ ಮೇಲಿರುತ್ತದೆ. ಒಟ್ಟಾರೆ ಪಾತ್ರ ಜನರಿಗೆ ಇಷ್ಟ ಆಗಿದೆ ಎಂದು ನಾನು ಭಾವಿಸುತ್ತಿದ್ದೇನೆ.

★ *ನಿಮ್ಮಲ್ಲಿ ನೆಗೆಟಿವ್ ಗುಣ ಹೆಚ್ಚಿದೆಯಾ?*

ಪಾತ್ರ ಪರಕಾಯ ಪ್ರವೇಶ ಒಮ್ಮೊಮ್ಮೆ ಹಾಗೆನಿಸುವಂತೆ ಮಾಡಿದೆ. ನನ್ನ ಸ್ನೇಹಿತರ ಜೊತೆ ಇದ್ದಾಗ ಅದು ಅನುಭವಕ್ಕೂ ಬಂದಿದೆ. ಆಗ ಅವರೆಲ್ಲಾ 'ಪ್ರಿಯಾಂಕ ನೀನು ಕಣೆ, ಚಂದ್ರಿಕಾ ಅಲ್ಲ' ಎಂದು ರೇಗಿಸುತ್ತಾರೆ. ಆಗ ನಾನು ಸರಿ ಕಣಮ್ಮ ಎಂದು ಸಿಟ್ಟು ಕಡಿಮೆ ಮಾಡಿಕೊಳ್ಳುತ್ತೇನೆ.

ವೈಯಕ್ತಿಕವಾಗಿ ನನಗೂ ಪಾತ್ರಕ್ಕೂ ತುಂಬಾ ವ್ಯತ್ಯಾಸ ಇದೆ. ನಾನು ತುಂಬ ಮೃದು ಸ್ವಭಾವದ ಧನಾತ್ಮಕ ಗುಣದವಳು. ಸೆಟ್‌ನಲ್ಲಿಯೂ ಕೂಡ ಎಲ್ಲರ ಜೊತೆ ಮಾತನಾಡುತ್ತೇನೆ. ಕೀಟಲೆ– ತಮಾಷೆಯನ್ನು ಮಾಡುತ್ತಾ ನಗುತ್ತೇನೆ.

■ ರಾಗು